ಓ.ಎಸ್.ನಂ.148/2021
ಪಿ.ಡಬ್ಲ್ಯೂ-1

ದಿನಾಂಕಃ 08-08-2024 ರಂದು ಪಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ ಶ್ರೀ. ಸಿ.ಆರ್.ಎಸ್ ವಕೀಲರಿಂದ:</u>

7. ದಾವಾ ಸ್ವತ್ತಿನ ಪಶ್ಚಿಮ ಭಾಗದಲ್ಲಿ ವಾದಿಯರು ಕೃಷಿಹೊಂಡ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಯಾವುದೇ ಕೃಷಿಹೊಂಡ ಇರುವುದಿಲ್ಲ ಹಳೆಯ ಬಾವಿ ಇರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ. ದಾವಾ ಸ್ವತ್ತಿನ ಉತ್ತರ ಭಾಗದಲ್ಲಿ ಬಾವಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಬಾವಿ ಹಾಳು ಬಿದ್ದಿರುವ ಬಾವಿಯಾಗಿರುತ್ತದೆ ಮತ್ತು ಅದರಲ್ಲಿ ಮುಳ್ಳು ಕಂಟಿಗಳು ಬೆಳೆದಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರದೇ ಇದ್ದುದ್ದರಿಂದ ಬಾವಿ ಮತ್ತು ಕೃಷಿಹೊಂಡ ಯಾವ ಭಾಗದಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತಿನಲ್ಲಿ ತೋಗರಿ ಬೆಳೆಯ ಕಸವನ್ನು 8-10 ಆಳುಗಳ ಸಹಾಯದಿಂದ ಸ್ವಚ್ಛಗೊಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಿಃ 17-09-2004 ರಿಂದ 18-09-2021 ರವರೆಗೆ ವಾದಿಯರು ದಾವಾ ಸ್ವತ್ತಿನ ಮೇಲೆ ಇರುವ ನಮ್ಮ ಮಾಲಿಕತ್ವವನ್ನು ಅಲ್ಲಗಳೆಯುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ದಾವಾ ಜಮೀನನ್ನು ತಮ್ಮ ಮಾಲ್ಕಿನಾತೆಯಿಂದ ನಿರಾತಂಕವಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

8. ದಿಃ 22-09-2021 ರಂದು ವಾದಿಯರವನ್ನು ದಾವಾ ಸ್ವತ್ತಿನ ಕಬ್ಜೆಯಿಂದ ಹೊರಹಾಕಲು ಸಾವಳಗಿ ಪೋಲಿಸರ ಮೂಲಕ ತಹಶಿಲ್ದಾರ ಜಮಖಂಡಿ ರವರಿಗೆ ದೂರು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತನ್ನ ಕಬ್ಜೆ ವಹಿವಾಟಿಗೆ ತೋಂದರೆ ಮಾಡುತ್ತಿದ್ದಾರೆ ಎನ್ನುವುದಕ್ಕಾಗಿ ದೂರು ಸಲ್ಲಿಸಲಾಗಿರುತ್ತದೆ ಎಂದು ಸ್ವತಃ

ನುಡಿಯುತ್ತಾರೆ. ವಾದಿಯುರು ನನ್ನ ಕಬ್ಜೆ ವಹಿವಾಟಿಗೆ ತೊಂದರೆ ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ತಮ್ಮ ಜಾನುವಾರಗಳೊಂದಿಗೆ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ತೋಗರಿ ಬೆಳೆ ಹೂ ಬಿಡುವ ಹಂತದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ವ್ಯಯಕ್ತಿಕವಾಗಿ ಆಗಲಿ ಅಥವಾ ಆಳುಗಳ ಮೂಲಕ ಆಗಲಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಯ ಕಬ್ಜೆಯನ್ನು ಹೊಂದಿರುವುದನ್ನು ನಾವು ನೋಡುತ್ತಲೆ ಬಂದಿರುತ್ತೇವೆ ಎಂದರೆ ಸರಿಯಲ್ಲ. 1976 ರಿಂದ ಇಲ್ಲಿಯ ವರೆಗೆ ನಾವು ದಾವಾ ಸ್ವತ್ತಿನ ಕಬ್ಜೆಯನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪಾಟೀ ಸವಾಲಿನಲ್ಲಿ ತೋರಿಸಲಾದ ಫೋಟೊ ದಾವಾ ಸ್ವತ್ತಿನ ಫೋಟೊ ಆಗಿದ್ದರೂ ಸಹಿತ ನಾನು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜಾಂಶವನ್ನು ಮರೆಮಾಚಿ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಬೆಳೆದ ಬೆಳೆಗಳನ್ನು ಮಾಡಿದ ಕುರಿತಾಗಿ ದಾಖಲೆ ಹಾಜರ ಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಲ್ಲಿ ನಮಗೆ ಬೆಲೆ ಜಾಸ್ತಿ ಸಿಗುತ್ತಿದ್ದೆಯೋ ಅಲ್ಲಿ ಮಾರಾಟ ಮಾಡುತ್ತೇವೆ ಎಂದು ಸ್ವತಃ ನುಡಿಯುುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ